

## ವಾಟ್ಸ್‌ಆ್ಯಪ್ ಗ್ರೂಪ್

ಟ್ರಾಫಿಕ್ ಸಿಗ್ನಲ್‌ನಲ್ಲಿ ಭಿಕ್ಷುಕನೊಬ್ಬನಿಗೆ ಕಾರಿನಲ್ಲಿದ್ದವ ಒಂದು ರೂಪಾಯಿಯ ನಾಣ್ಯ ಹಾಕಿದ.
ಭಿಕ್ಷುಕ ಅದಕ್ಕೆ, 'ಏನ್ ಸ್ವಾಮಿ ಅನ್ಯಾಯ... ನಿನ್ನೆ ಒಬ್ಬ ಭಿಕ್ಷುಕನಿಗೆ 10ರೂಪಾಯಿ ಹಾಕಿದ್ರಿ. ಇವತ್ತು ಬರೀ ಒಂದು ರೂಪಾಯಿ ಹಾಕಿದ್ದೀರಿ... ಭಿಕ್ಷುಕರಲ್ಲೇ ಭೇದಭಾವ ಮಾಡ್ತೀರಲ್ಲಾ?' ಎಂದು ಕೇಳಿದ.
ಕಾರಿನವ, 'ನಾನು ನಿನ್ನೆ 10 ರೂಪಾಯಿ ಹಾಕಿದ್ದು ನಿನಗೆ ಹೇಗೆ ತಿಳೀತು?' ಎಂದು ಆಶ್ಚರ್ಯ ಚಕಿತನಾಗಿ ಭಿಕ್ಷುಕನನ್ನೇ ನೋಡಿದ.
'ಅಯ್ಯೋ... ಅವನು ನನ್ನ ಗೆಳೆಯ ಸ್ವಾಮಿ. ನಾವಿಬ್ರು ಒಂದೇ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿದ್ದೀವಿ. ನಿನ್ನೆ ಅವನು ನಿಮ್ಮ ಕಾರಿನ ಫೋಟೊ ತೆಗೆದು ವಾಟ್ಸ್‌ಆ್ಯಪ್‌ಗೆ ಅಪ್‌ಲೋಡ್ ಮಾಡಿದ್ದ...' ಎಂದು ಅವನು ಹೇಳಿಮುಗಿಸುವಷ್ಟರಲ್ಲಿ ಸಿಗ್ನಲ್ ಬಿದ್ದು ಕಾರಿನವನು ಬಚಾವಾದ!

**ಪ.ನಾ.ಹಳ್ಳಿ ಹರೀಶಕುಮಾರ್, ಲಿಂಗದಹಳ್ಳಿ**

## ಹುಟ್ಟಿದ್ದು ಹೇಗೆ?

'ಅಮ್ಮಾ! ನಾನು ಹೇಗೆ ಹುಟ್ಟಿದೆ?' ಐದು ವರ್ಷದ ಗುಂಡ ಕೇಳಿದ.
ಉತ್ತರಿಸಲು ತಡಬಡಾಯಿಸಿದ ತಾಯಿ ಅಂದಳು:
'ನೀನು... ನೀನು... ನಮಗೆ ಒಂದು ಕುಂಬಳಕಾಯಿ ತರಹ ಸಿಕ್ಕೆ ಕಣೋ!'
'ಮತ್ತೆ ನೀನು ಹೇಗೆ ಹುಟ್ಟಿದೆ?' ಮತ್ತೆ ಕೇಳಿದ ಗುಂಡ.
'ನನ್ನ ಒಂದು ಆನೆ ತಂದು ನಮ್ಮಮ್ಮನಿಗೆ ಕೊಟ್ಟಿತಂತೆ!'
'ಹೌದಾ! ಮತ್ತೆ ನಮ್ಮ ಅಜ್ಜಿ ಹೇಗೆ ಹುಟ್ಟಿದ್ರು?'
'ಅಜ್ಜಿ... ಮೋಡದಿಂದ ಜಾರಿ ಭೂಮಿಗೆ ಬಂದ್ರಂತೆ ಗುಂಡ!'
'ಅರೆ! ಹಾಗಾದ್ರೆ ನಮ್ಮ ಮೂರು ತಲೆಮಾರುಗಳಲ್ಲಿ ಯಾರೂ ನಾರ್ಮಲ್ ಡೆಲಿವರಿಯಾಗಿ ಹುಟ್ಟೇ ಇಲ್ವಾ!' ಗುಂಡನ ತಾಯಿ ನಿರುತ್ತರಳಾದಳು.



**ರಾಮಪ್ರಸಾದ ಬಿ., ಹೊಸಪೇಟೆ**